**IN THE NATIONAL LOK ADALTH**
**CIVIL JUDGE AND JMFC COURT,**
**DEVADURGA**
**OS No.42/2026**

**ಪ್ರಕರಣವನ್ನು** ದಿನಾಂಕ **11.07.2026** ರಂದು ರಾಷ್ಟ್ರೀಯ ಲೋಕ ಆದಾಲತ್ ನಲ್ಲಿ **ಕರೆಯಲಾಯಿತು.**

ವಾದಿಯರು ಮತ್ತು ಪ್ರತಿವಾದಿಯರು ಹಾಗೂ ವಾದಿಯರ ಪರ ಶ್ರೀ ಹೆಚ್.ಎಲ್.ಸಿ, ವಕೀಲರು, ಹಾಗೂ ಪ್ರತಿವಾದಿಯರ ಪರ ಶ್ರೀ ಸಿ.ಆರ್.ಜಿ., ವಕೀಲರು **ಹಾಜರಿರುತ್ತಾರೆ.**

ವಾದಿಯರು **ಮತ್ತು** ಪ್ರತಿವಾದಿಯರ **ಪರ ವಕೀಲರು ಆದೇಶ 23 ನಿಯಮ 3 ಸಹವಾಚಕ ಸಿ.ಪಿ.ಸಿ. ಅನ್ವಯ ಉಭಯ ಪಕ್ಷಗಾರರ ರಾಜಿ ಪತ್ರವನ್ನು** ಸಲ್ಲಿಸಿರುತ್ತಾರೆ. ಸದರಿ ರಾಜಿ ಅರ್ಜಿಯಲ್ಲಿ ವಾದಿಯರು ಮತ್ತು ಪ್ರತಿವಾದಿಯರು ಗುರುಹಿರಿಯರ ಮತ್ತು ಬಂಧು-ಮಿತ್ರರ ಸಮಕ್ಷಮದಲ್ಲಿ ರಾಜೀ ತೀರ್ಮಾನ ಮಾಡಿಕೊಂಡಿದ್ದು, ವಾದಿ ಯರು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಾಗಿದ್ದು, ದಾವಾನುಸೂಚಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಯಾಗಿದ್ದು,

ದೇವದುರ್ಗ ತಾಲ್ಲೂಕು, ದೇವದುರ್ಗ ಹೋಬಳಿ, ಮಸರಕಲ್ ಗ್ರಾಮದ ಕೃಷಿ ಭೂಮಿಯು ಸರ್ವೆ ನಂ.**312/*/5** ಒಟ್ಟು ವಿಸ್ತೀರ್ಣ **04-28** ಗುಂಟೆ ಇದ್ದು, ಜಂಟಿಯಾಗಿದ್ದು ಇದರ ಪೈಕಿ ವಾದಿ ನಂ.1 ರವರ ಭಾಗಕ್ಕೆ ಸದರಿ ಜಮೀನಿನಲ್ಲಿ **4-02** ಗುಂಟೆ ಬರುತ್ತಿದ್ದು, ಎಂದು ವಾದಿ ನಂ.2 ಮತ್ತು 3 ರವರು ಮತ್ತು ಪ್ರತಿವಾದಿಯವರು ತಮ್ಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಇದರ ಪೈಕಿ ಪ್ರತಿವಾದಿ ನಂ.2 ರವರ ಭಾಗಕ್ಕೆ ಸದರಿ ಜಮೀನಿನಲ್ಲಿ **00-27** ಗುಂಟೆ ಬರುತ್ತಿದ್ದು, ಎಂದು ವಾದಿ ನಂ.1 ರಿಂದ 3 ರವರು ಮತ್ತು ಪ್ರತಿವಾದಿಯವರು ತಮ್ಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

ದೇವದುರ್ಗ ತಾಲ್ಲೂಕು, ದೇವದುರ್ಗ ಹೋಬಳಿ, ಮಸರಕಲ್ ಗ್ರಾಮದ ಕೃಷಿ ಭೂಮಿಯು ಸರ್ವೆ ನಂ.**325/*/2** ಒಟ್ಟು ವಿಸ್ತೀರ್ಣ **01-13** ಗುಂಟೆ ಇದ್ದು, ಜಂಟಿಯಾಗಿದ್ದು ಇದರ ಪೈಕಿ ಪ್ರತಿವಾದಿ ನಂ.1(ಎ) ರವರ ಭಾಗಕ್ಕೆ ಸದರಿ ಜಮೀನಿನಲ್ಲಿ **1-13** ಗುಂಟೆ ಬರುತ್ತಿದ್ದು, ಎಂದು ವಾದಿ ನಂ.1 ರಿಂದ 3 ರವರು ಮತ್ತು ಪ್ರತಿವಾದಿಯವರು ತಮ್ಮಗೆ ಯಾವುದೇ ಹಕ್ಕು ಇರುವುದಿಲ್ಲ

ಎಂದು ಒಪ್ಪಿಕೊಂಡಿರುತ್ತಾರೆ.

ಮೇಲೆ ಹೇಳಿದಂತೆ ಜಮೀನು ಹಂಚಿಕೊಂಡಿದ್ದು ಜಮೀನನ್ನು ಸ್ವ ಇಚ್ಚೆಯಿಂದ ಯಾವುದೇ ಪ್ರಭಾವಕ್ಕೆ ಮತ್ತು ಒತ್ತಾಯಕ್ಕೆ ಮಣಿಯದೇ ಸ್ವ-ಸಂತೋಷದಿಂದ ಹಂಚಿಕೆ ಮಾಡಿ ಕೊಟ್ಟಿರುತ್ತಾರೆ.

ವಾದಿಯರು ಮತ್ತು ಪ್ರತಿವಾದಿಯರು ಯಾವುದೇ ಒತ್ತಡಕ್ಕೆ, ಆಮಿಷಗಳಿಗೆ ಒಳಗಾಗದೇ ಮೋಸ-ವಂಚನೆ ಮಾಡದ ರೀತಿಯಲ್ಲಿ ರಾಜೀ ಮಾಡಿಕೊಂಡಿದ್ದು, ಸದರಿ ರಾಜೀ ಅರ್ಜಿಯನ್ನು ಪುರಸ್ಕರಿಸಲು ಸೂಕ್ತ ಆದೇಶ ದಯಪಾಲಿಸಬೇಕಾಗಿ ಕೋರಿ, ಅದರಂತೆ ಅಂತಿಮ ಡಿಕ್ರಿ ಆದೇಶ ಮಾಡಬೇಕಾಗಿ ಪ್ರಾರ್ಥಿಸಿರುತ್ತಾರೆ. ರಾಜೀ ಅರ್ಜಿ **ಸಲ್ಲಿಸಿ ಅದರೊಂದಿಗೆ ವಾದಿ ಮತ್ತು** ಪ್ರತಿವಾದಿಯರ **ಗುರುತಿನ ಬಗ್ಗೆ ಆಧಾರ ಕಾರ್ಡಗಳನ್ನು** ಭಾವಚಿತ್ರಗಳೊಂದಿಗೆ **ಸಲ್ಲಿಸಿರುತ್ತಾರೆ.**

**ರಾಜಿ ಪತ್ರವನ್ನು ಪರಿಶೀಲಿಸಲಾಯಿತು.**

**ರಾಜಿ ಪತ್ರಲ್ಲಿರುವ ವಿಷಯಗಳನ್ನು ಉಭಯ ಪಕ್ಷಗಾರರಿಗೆ ಓದಿ ತಿಳಿಸಲಾಯಿತು. ಉಭಯ ಪಕ್ಷಗಾರರು ರಾಜಿ ಪತ್ರಲ್ಲಿರುವ ವಿಷಯಗಳಿಗೆ ತಮ್ಮ ಯಾವುದೇ ತಕರಾರು ಇಲ್ಲವೆಂದು ಒಪ್ಪಿ ಸಹಿ ಮಾಡಿರುವುದಾಗಿ ಮತ್ತು ಅದಕ್ಕೆ ಸಮ್ಮತಿ ಇರುವುದಾಗಿ ತಿಳಿಸಿರುತ್ತಾರೆ. ರಾಜಿಯು ಉಭಯ ಪಕ್ಷಗಾರರಿಗೆ ಅನುಕೂಲಕರ** ಆಗಿರುತ್ತದೆ. **ಆದ್ದರಿಂದ ಈ ಕೆಳಗಿನಂತೆಃ-**

**-ಃ ಆದೇಶ ಃ-**

**ಉಭಯ ಪಕ್ಷಗಾರರು ಆದೇಶ** 23 **ನಿಯಮ** 3 **ಸಿ.ಪಿ.ಸಿ. ಅನ್ವಯ ಸಲ್ಲಿಸಿದ ರಾಜಿ ಅರ್ಜಿಯನ್ನು ಪುರಸ್ಕರಿಸಿ ದಾವೆಯನ್ನು ವಿಲೇವಾರಿ ಮಾಡಲಾಯಿತು.**

**ಮುಂದಿನ ನಡುವಳಿಕೆಗಳು ಇಲ್ಲದ ಕಾರಣ ಪ್ರಾಥಮಿಕ ಡಿಕ್ರಿಯನ್ನು ಅಂತಿಮ ಡಿಕ್ರಿಯೆಂದು ಪರಿಗಣಿಸಲಾಗಿದೆ.**

**ಉಭಯ ಪಕ್ಷಗಾರರು ಸೂಕ್ತ ಮೊತ್ತದ ನ್ಯಾಯಿಕವಲ್ಲದ ಮುದ್ರಾಂಕ ಶುಲ್ಕದ ಕಾಗದಪತ್ರವನ್ನು ನೀಡತಕ್ಕದ್ದು.**

**ಅದರಂತೆ ಡಿಕ್ರಿಯನ್ನು ತಯಾರಿಸತಕ್ಕದ್ದು.**

| | |
|---|---|
| ಸಹಿ/- | ಸಹಿ/- |
| **2ನೇ ಸಂಧಾನಕಾರರು<br>ವಕೀಲರು** | **1ನೇ ಸಂಧಾನಕಾರರು<br>ಸಿವಿಲ್ ನ್ಯಾಯಾಧೀಶರು,**<br>ದೇವದುರ್ಗ |